**ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 02-06-2026 ರಂದು ಬೊಧಿಸಲಾಯಿತು.**

ಪಾಟೀಸವಾಲುಃ 2 ನೇ ಪ್ರತಿವಾದಿ ಪರ ವಕೀಲರಿಂದಃ

ಕ್ಯಾದಗಿ ಗ್ರಾಮದ ಸರ್ವೆ ನಂ 243 ಕ್ಕೆ ಸಂಬಂದಿಸಿದಂತೆ ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ. ಕ್ಯಾದಗಿ ಗ್ರಾಮದ ಸರ್ವೆ ನಂ 243 ರಲ್ಲಿ ನಿಮಗೆ ಎಷ್ಟ ಕ್ಷೇತ್ರಕ್ಕೆ ಸಂಬಂದಿಸಿದಂತೆ ಹಕ್ಕು ಇರುತ್ತದೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು 1/3 ಭಾಗದಷ್ಟು ಹಕ್ಕು ಇರುತ್ತದೆ ಎಂದು ನುಡಿಯುತ್ತಾರೆ.
ಸದರಿ 1/3 ಭಾಗವು ನಿಗದಿ ಆಗಿರುತ್ತದೆಯೇ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ಕ್ಯಾದಗಿ, ಹೆಗ್ಗರಿ ಹಾಗೂ ಹೊಸಮನೆಗೆ ಹೋಗುವ ರಸ್ತೆಗಳು ಜಿಲ್ಲಾ ಪಂಚಾಯತಿಯ ವ್ಯಾಪ್ತಿಗೆ ಒಳಪಡುತ್ತದೆ ಎಂದರೆ ಸರಿ. ಕ್ಯಾದಗಿ, ಹೆಗ್ಗರಿ ಹಾಗೂ ಹೊಸಮನೆಗೆ ಹೋಗುವ ರಸ್ತೆಗಳು 2019-2020 ರಿಂದ ಪಂಚಾಯತಿ ದಾಖಲೆಗಳಲ್ಲಿ ನಮೂದಾಗಿರುತ್ತದೆ ಎಂದರೆ ಸರಿ. ಸದರಿ ರಸ್ತೆಗಳ ಸುಧಾರಣೆಗಾಗಿ 2019-2020 ರ ಕ್ಯಾದಗಿ ಪಂಚಾಯತಿಯ ಕ್ರಿಯಾ ಯೋಜನೆಯ ದಾಖಲೆಗಳಲ್ಲಿ ನಮೂದಿಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸದರಿ ರಸ್ತೆಗಳ ಸುಧಾರಣೆಯನ್ನು ಕಾಂಟ್ರ್ಯಾಕ್ಟರ್ ಕೆ ವಿ ಪ್ರಶಾಂತ ರವರು ಮಾಡಿರುತ್ತಾರೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸದರಿ ಕಾಂಟ್ರ್ಯಾಕ್ಟರ ರವರು ಸದರಿ ರಸ್ತೆಗಳ ಸುಧಾರಣೆಯ ಕಾಮಗಾರಿಯನ್ನು ದಿಃ 25-02-2020 ಕ್ಕೆ ಪ್ರಾರಂಭಿಸಿ ದಿಃ 10-03-2020 ಕ್ಕೆ ಮುಕ್ತಾಯ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ.

ಈ ನ್ಯಾಯಾಲಯದಿಂದ ಪ್ರತಿವಾದಿಯರಿಗೆ ಸಮನ್ಸ ಬರುವ ಹೊತ್ತಿಗೆ ಸದರಿ ರಸ್ತೆಗಳ ಕಾಮಗಾರಿ ಮುಗಿದಿತ್ತು ಎಂದರೆ ಸರಿಯಲ್ಲ. ಆದ್ದರಿಂದ ದಾವೆಯಲ್ಲಿ ತಿಳಿಸಿರುವಂತೆ ಪರಿಹಾರವನ್ನು ಪಡೆಯಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ.

ಪಾಟೀಸವಾಲುಃ 3 ನೇ ಪ್ರತಿವಾದಿ ಪರ ವಕೀಲರಿಂದಃ

ಕ್ಯಾದಗಿ, ಹೆಗ್ಗರಿ ಹಾಗೂ ಹೊಸಮನೆ ರಸ್ತೆಗಳು ದಾವಾಸ್ತಿಯಲ್ಲಿ ಎಷ್ಟು ವರ್ಷಗಳಿಂದ ಅಸ್ತಿತ್ವದಲ್ಲಿ ಇರುತ್ತದೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಅಸ್ತಿತ್ವದಲ್ಲಿಯೇ ಇರಲಿಲ್ಲ ಎಂದು ನುಡಿಯುತ್ತಾರೆ.

ಕ್ಯಾದಗಿ ಗ್ರಾಮ ಪಂಚಾಯತಿ ರಸ್ತೆ ರೆಜಿಸ್ಟರ್ ನಲ್ಲಿ ಸದರಿ ರಸ್ತೆಯ 1980-1990 ರಿಂದ ಅಸ್ತಿತ್ವದಲ್ಲಿ ಇರುತ್ತದೆ ಎಂದು ನಮುದಾಗಿರುತ್ತದೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ.

ಕ್ಯಾದಗಿ, ಹೆಗ್ಗರಿ ಮುಖ್ಯ ರಸ್ತೆಯಿಂದ ಗಣಪತಿ ತಿಮ್ಮಪ್ಪ ಹೆಗಡೆ ಹೊಸಮನೆ ರವರ ಮನೆಗೆ ಹೋಗಲು ದಾವಾ ಸ್ವತ್ತಿನಲ್ಲಿರುವ ರಸ್ತೆಯನ್ನು ಹೊರತುಪಡಿಸಿ ಬೇರೇ ರಸ್ತೆ ಇರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಕ್ಯಾದಗಿ ಗ್ರಾಮದ ಸರ್ವೆ ನಂ 243 ರಲ್ಲಿ ಯಾವ ವ್ಯಕ್ತಿಯ 1/3 ಅಂಶದಲ್ಲಿ ರಸ್ತೆ ಇರುತ್ತದೆ ಎನ್ನುವ ಬಗ್ಗೆ ನಿಮಗೆ ಮಾಹಿತಿ ಇರುತ್ತದೆಯೇ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಕ್ಯಾದಗಿ ಹೆಗ್ಗೆರಿ ಹಾಗೂ ಹೊಸಮನೆಗೆ ಹೋಗುವ ರಸ್ತೆಗಳ ಸುಧಾರಣೆಗಳನ್ನು 2020 ರಲ್ಲಿಯೇ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ರಸ್ತೆಯು ಯಾರ ಹಕ್ಕಿನ ಸ್ವತ್ತಿನ ವ್ಯಾಪ್ತಿಗೆ ಒಳಪಡುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಮೂರು ಜನರ ಹಕ್ಕಿನ ಸ್ವತ್ತಿನ ವ್ಯಾಪ್ತಿಗೆ ಒಳಪಡುತ್ತದೆ ಎಂದು ನುಡಿಯುತ್ತಾರೆ.

ಕ್ಯಾದಗಿ ಗ್ರಾಮದ ಸರ್ವೆ ನಂ 243 ರಲ್ಲಿ ನಿಮಗೆ ಸೇರಿದ 1/3 ಅಂಶದ ಹಕ್ಕನ್ನು ಪ್ರತ್ಯೇಕಿಸಿಕೊಳ್ಳಲು ಪ್ರಯತ್ನ ಮಾಡಿರುತ್ತೀರಾ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ಕ್ಯಾದಗಿ ಗ್ರಾಮದ ಸರ್ವೆ ನಂ 243 ರಲ್ಲಿ ನಾಲ್ಕು ಗುಂಟೆ ಖರಾಬ್ ಇದ್ದು ಅದನ್ನು ಯಾವ ಉದ್ದೇಶಕ್ಕಾಗಿ ಬಿಟ್ಟಿರುತ್ತಾರೆ ಎಂದು ನಿಮಗೆ ಗೊತ್ತಿದೆಯೇ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ . ಕ್ಯಾದಗಿ ಗ್ರಾಮದ ಸರ್ವೆ ನಂ 243 ರಲ್ಲಿ ಗಣಪತಿ ತಿಮ್ಮಪ್ಪ ಹೆಗಡೆ ರವರು ದೀರ್ಘ ಕಾಲದಿಂದಲೂ ತಮ್ಮ ಮನೆಗೆ ಓಡಾಡಲು ಹಾಗೂ ಜಾನುವಾರುಗಳನ್ನು ಹಾಗೂ ವಾಹನಗಳನ್ನು ಓಡಾಡಲು ಸದರಿ ರಸ್ತೆಯನ್ನು ಬಳಸುತ್ತಿದ್ದಾರೆ ಎಂದರೆ ಸರಿಯಲ್ಲ.

ಗಣಪತಿ ತಿಮ್ಮಪ್ಪ ಹೆಗಡೆ ರವರ ಬಳಿ ಒಂದು ಜೀಪ್ ಇರುತ್ತದೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಗಣಪತಿ ತಿಮ್ಮಪ್ಪ ಹೆಗಡೆ ರವರ ಮನೆಗೆ ಪ್ರವೇಶಿಸುವ ಸ್ಥಳದಲ್ಲಿ ಒಂದು ಗೇಟ್ ನ್ನು ಸಹ ಅಳವಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ಕ್ಯಾದಗಿ ಹೆಗ್ಗೆರಿ ಹಾಗೂ ಹೊಸಮನೆ ರಸ್ತೆಯನ್ನು ಕ್ಯಾದಗಿ ಗ್ರಾಮ ಪಂಚಾಯತರವರು 1989-1990 ರಿಂದ ಅಭಿವೃದ್ಧಿ ಪಡಿಸುತ್ತಲೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುರೆದು 2021 ರಲ್ಲಿ ಅಭಿವೃದ್ಧಿ ಪಡಿಸಿರುತ್ತಾರೆ ಎಂದು ನುಡಿಯುತ್ತಾರೆ.

ನೀವು ನ್ಯಾಯಾಲಯದ ಮುಂದೆ ಸತ್ಯ ಸಂಗತಿಗಳನ್ನು ಮುಚ್ಚಿಟ್ಟು ಸುಳ್ಳು ಪ್ರಮಾಣ ಪತ್ರವನ್ನು ದಾಖಲಿಸಿರುತ್ತಿರಾ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಕ್ಯಾದಗಿ ಗ್ರಾಮದ

ಸರ್ವೆ ನಂ 243 ರಲ್ಲಿ ರಸ್ತೆ ಕಾಮಗಾರಿ 2021 ರಲ್ಲಿ ಪ್ರಾರಂಭಿಸಿರುವ ಬಗ್ಗೆ ನಿಮ್ಮ ಹೇಳಿಕೆಯನ್ನು ಹೊರತುಪಡಿಸಿ ಬೇರೇಯಾವುದಾದರೂ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಿರಾ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾನು ದಿಃ 08-01-2021 ರಂದು ಸ್ಥಳಕ್ಕೆ ಬೇಟೀ ನೀಡಿದ್ದು ಅಲ್ಲಿ ರಸ್ತೆ ಕಾಮಗಾರಿ ನಡೆಯುತ್ತಿದ್ದು ಅದರ ಪೋಟೊಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

ದಿಃ 23-07-2024 ರಲ್ಲಿ ನಾನು ಈ ದಾವೆಯಲ್ಲಿ mandatory relief ಬೇಕು ಎಂದು ಅರ್ಜಿ ಸಂಖ್ಯೆ4 ನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಅರ್ಜಿಯ ಜೊತೆಗೆ ಸಲ್ಲಿಸಿದ ಪ್ರಮಾಣ ಪತ್ರದ 3 ನೇ ಪ್ಯಾರಾದಲ್ಲಿ 2024 ರ ಜೂನ್ ಎರಡನೇ ವಾರದಲ್ಲಿ ರಸ್ತೆ ಸುಧಾರಣೆ ಕಾಮಗಾರಿಯು ಪೂರ್ತಿ ಆಗಿರುತ್ತದೆ ಎಂದು ಬರೆಸಿರುತ್ತೇನೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. 2021 ರಲ್ಲಿ ರಸ್ತೆ ಕಾಮಗಾರಿ ಪ್ರಾರಂಭ ಆಗಿರುವ ಬಗ್ಗೆ ಲಿಖಿತ ಹೇಳಿಕೆ ನೀಡಿರುತ್ತೀರಾ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. 2021 ರಸ್ತೆ ಕಾಮಗಾರಿ ಪ್ರಾರಂಭ ಆಗಿರುವ ಬಗ್ಗೆ ಸಂಬಂದಪಟ್ಟ ಇಲಾಖೆಗೆ ತಕರಾರು ನೀಡಿರುತ್ತೀರಾ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಈ ದಾವೆ ಸಲ್ಲಿಸಿದ ನಂತರ ಗ್ರಾಮ ಪಂಚಾಯತ ಹಾಗೂ ಜಿಲ್ಲಾ ಪಂಚಾಯತ ಕಚೇರಿಗೆ ಮಾಹಿತಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ.

ನಾನು ಯಾವುದೇ ಇಲಾಖೆಗೂ ಯಾವುದೇ ತಕರಾರು ಅರ್ಜಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ 243 ರಲ್ಲಿ ನನ್ನ 1/3 ಅಂಶವು ಬೇರೇಯಾಗುವ ವರೆಗೂ ನನಗೆ ಈ ದಾವೆಯಲ್ಲಿ ಪರಿಹಾರವನ್ನು ಕೇಳಲು ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಿಃ 08-01-2021 ರಂದು ಈ ದಾವೆಯನ್ನು ಸಲ್ಲಿಸಲು ವ್ಯಾಜ್ಯ ಕಾರಣ ಉಂಟಾಗಿದೆ ಎಂದು ಕಾಲ್ಪನಿಕ ವ್ಯಾಜ್ಯ ಕಾರಣವನ್ನು ನಾನು ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ಕ್ಯಾದಗಿ ಗ್ರಾಮ ಪಂಚಾಯತ್ ರವರು ರಸ್ತೆಯ ವಿಚಾರದಲ್ಲಿ ಯಾವುದೇ ಕಾನೂನು ಉಲ್ಲಂಘನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಸಾ.ಓ.ಹೇ.ಸ.ಒ

ಸಹಿ ಇದೆ.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ

ಸಿದ್ದಾಪುರ